For more job news visit : www.kpscvaani.com

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
KARNATAK UNIVERSITY, DHARWAD
NAAC Accredited with "A" Grade 2014
"UNIVERSITY WITH POTENTIAL FOR EXCELLENCE"
ಸಿಬ್ಬಂದಿ ಹಾಗೂ ಆಡಳಿತ ಸುಧಾರಣಾ ವಿಭಾಗ
D.P.A.R

ಪಾವಟೆನಗರ, ಧಾರವಾಡ.
Pavate Nagar, Dharwad.
ದೂರವಾಣಿ ಸಂ.2215349
Tel Ph. No.2215349
Website : www.kud.ac.in

ನಂ.ಕವಿವಿ/ಸಿಆಸುವಿ/ಶಿಕ್ಷಕೇತರ/10/2021/213 ದಿನಾಂಕ: 05 MAY 2021

ತಾತ್ಕಾಲಿಕ ಹುದ್ದೆಗಳ ನೇಮಕಾತಿಗೆ ಅಧಿಸೂಚನೆ

ವಿಷಯ: ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ತಾತ್ಕಾಲಿಕವಾಗಿ ಸಂಚಿತ ವೇತನ ಆಧಾರದ ಅಡಿಯಲ್ಲಿ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವ ಕುರಿತು.

ಉಲ್ಲೇಖ: 1) ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ವಿಧೇಯಕ, 2000
2) ಸಿಂಡಿಕೇಟ್ ಸಭೆಯ ನಿರ್ಣಯ ಸಂಖ್ಯೆ. 03 ದಿನಾಂಕ: 10.03.2021.
3) ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 05.05.2021.

* * *

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ವಿವಿಧ ವಿಭಾಗಗಳಲ್ಲಿ ಖಾಲಿ ಇರುವ ಈ ಕೆಳಕಂಡ ಹುದ್ದೆಗಳ ಕಾರ್ಯನಿರ್ವಾಹಣೆಗಾಗಿ. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ವಿಧೇಯಕ, 2000 ರ ಉಪನಿಯಮ 56 ರ ಪ್ರಕಾರ ಹಾಗೂ ಅನುಶಾಸನ ಸಂಖ್ಯೆ. S&S/SYS/86-87-364 dated: 10.11.1986 ರ ಅನ್ವಯ ತಾತ್ಕಾಲಿಕವಾಗಿ ಸಂಚಿತ ವೇತನದ ಆಧಾರದ ಮೇಲೆ (On Consolidated Salary which will be purely on temporary basis) ಕಾರ್ಯ ನಿರ್ವಹಿಸಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸಲು ಬಯಸುವ ಅಭ್ಯರ್ಥಿಗಳು ಅರ್ಜಿಗಳನ್ನು ವಿಶ್ವವಿದ್ಯಾಲಯದ ಅಂತರ್ಜಾಲ www.kud.ac.in ರ Notification ಕಾಲಂದಿಂದ ಪಡೆದುಕೊಂಡು ಸಂಪೂರ್ಣವಾಗಿ ಭರ್ತಿ ಮಾಡಿದ ಅರ್ಜಿಗಳನ್ನು ಅಗತ್ಯ ದಾಖಲೆಗಳೊಂದಿಗೆ ದಿನಾಂಕ: 05.06.2021 ಅಥವಾ ಸದರಿ ದಿನಾಂಕ ಮತ್ತು ನಂತರದಲ್ಲಿಯೂ ಸಹ ಲಾಕ್‌ಡೌನ್ ಇದ್ದಲ್ಲಿ ಲಾಕ್‌ಡೌನ್ ಅವಧಿ ಮುಗಿದ ದಿನಾಂಕದಿಂದ ಮುಂದಿನ 10 ಕರ್ತವ್ಯದ ದಿನಗಳೊಳಗಾಗಿ ಕಚೇರಿ ವೇಳೆಯಲ್ಲಿ ವಿಶ್ವವಿದ್ಯಾಲಯದ ಆವಕ ವಿಭಾಗದಲ್ಲಿ ಸಲ್ಲಿಸುವುದು.

ತಾತ್ಕಾಲಿಕ ಹುದ್ದೆಗಳು, ಅಗತ್ಯ ಅರ್ಹತೆ ಮತ್ತು ಸಂಚಿತ ವೇತನಗಳ ವಿವರ.

ಅ.ನಂ.	ಹುದ್ದೆಯ ಪದನಾಮ	ಹುದ್ದೆಗಳ ಸಂಖ್ಯೆ ಮತ್ತು ಮೀಸಲಾತಿ	ಅರ್ಹತೆಗಳು ಮತ್ತು ಸಲ್ಲಿಸಬೇಕಾದ ಪೂರಕ ದಾಖಲೆಗಳು	ನಿಗದಿಪಡಿಸಿದ ಸಂಚಿತ ವೇತನ
1.	ಸಹಾಯಕ ನಿರ್ದೇಶಕರು (ಕವಿವಿ ಮುದ್ರಣಾಲಯ)	01 ಸಾಮಾನ್ಯ	1) ಅಂಗೀಕೃತ ವಿಶ್ವವಿದ್ಯಾಲಯದಿಂದ ಪಡೆದ ಯಾವುದೇ ಪದವಿ 2) ಪ್ರಿಂಟಿಂಗ್ ಅಥವಾ ತತ್ಸಮಾನ ಅರ್ಹತೆ ಇರುವ 3 ವರ್ಷಗಳ ಡಿಪ್ಲೋಮಾ ಕೋರ್ಸ್. 3) 3 ವರ್ಷಗಳ ಸೇವಾ ಅನುಭವ	24,540/-
2.	ಕಾರ್ಯಾಗಾರ ಅಧಿಕಾರಿಗಳು/ವ್ಯವಸ್ಥಾಪಕರು	01 ಸಾಮಾನ್ಯ	1) ಮ್ಯಾಕ್ಯಾನಿಕಲ್ ಅಥವಾ ಇನ್‌ಸ್ಟ್ರುಮೆಂಟೇಶನ್‌ನಲ್ಲಿ 3 ವರ್ಷಗಳ ಡಿಪ್ಲೋಮಾ ಕೋರ್ಸ್ 2) 3 ವರ್ಷಗಳ ಸೇವಾ ಅನುಭವ	25,860/-
3.	ಕಿರಿಯ ಇಂಜನೀಯರ್ (ಸಿವಿಲ್)	02 (01-ಪರಿಶಿಷ್ಟ ಜಾತಿ 01-ಸಾಮಾನ್ಯ)	1) ಬಿ.ಇ. (ಸಿವಿಲ್) ಪದವಿ ಅಥವಾ ಸಿವಿಲ್ ಇಂಜನೀಯರಿಂಗ್‌ನಲ್ಲಿ 3 ವರ್ಷಗಳ ಡಿಪ್ಲೋಮಾ 2) 2 ವರ್ಷಗಳ ಸೇವಾ ಅನುಭವ	24,540/-
4.	ವರ್ಕ್ ಸೂಪರ್‌ವೈಸರ್	02 (01-ಪರಿಶಿಷ್ಟ ಜಾತಿ 01-ಸಾಮಾನ್ಯ)	1) ಸಿವಿಲ್ ಇಂಜನೀಯರಿಂಗ್‌ನಲ್ಲಿ 3 ವರ್ಷಗಳ ಡಿಪ್ಲೋಮಾ 2) 2 ವರ್ಷಗಳ ಸೇವಾ ಅನುಭವ	22,740/-
5.	ಇಲೆಕ್ಟ್ರೀಷಿಯನ್	03 (01-ಪರಿಶಿಷ್ಟ ಜಾತಿ 01-ಸಾಮಾನ್ಯ 01-ಪರಿಶಿಷ್ಟ ಪಂಗಡ)	1) ಎಸ್.ಎಸ್.ಎಲ್.ಸಿ. 2) ಐ.ಟಿ.ಐ. ಇಲೆಕ್ಟ್ರೀಕಲ್ ಉತ್ತೀರ್ಣ. 3) 3 ವರ್ಷಗಳ ಸೇವಾ ಅನುಭವ 4) 3 ವರ್ಷಗಳ ಡಿಪ್ಲೋಮಾ ಹೊಂದಿದವರಿಗೆ ಆದ್ಯತೆ ನೀಡಲಾಗುವುದು.	12,840/-

For more job news visit : www.kpscvaani.com

6.	ಕಾರ್ಪೆಂಟರ್ (ಬಡಿಗ)	01 (01–ಸಾಮಾನ್ಯ)	1) ಕಾರ್ಪೆಂಟರಿ ಕೊರ್ಸ್‌ನಲ್ಲಿ ಐ.ಟಿ.ಐ. 2) 2 ವರ್ಷಗಳ ಸೇವಾ ಅನುಭವ	12,840/-
7.	ಟರ್ನರ್	01 (01–ಸಾಮಾನ್ಯ)	1) ಎಸ್.ಎಸ್.ಎಲ್.ಸಿ. ಉತ್ತೀರ್ಣ 2) ಐ.ಟಿ.ಐ. ಟರ್ನರ್ ಉತ್ತೀರ್ಣ. 3) 3 ವರ್ಷಗಳ ಕೈಗಾರಿಕಾ ತರಬೇತಿ ಹೊಂದಿರಬೇಕು.	11,160/-
8.	ಫಿಟ್ಟರ್	01 (01–ಸಾಮಾನ್ಯ)	1) ಎಸ್.ಎಸ್.ಎಲ್.ಸಿ. ಉತ್ತೀರ್ಣ 2) ಐ.ಟಿ.ಐ.ಫಿಟರ್ ಉತ್ತೀರ್ಣ. 3) 3 ವರ್ಷಗಳ ಕೈಗಾರಿಕಾ ತರಬೇತಿ ಹೊಂದಿರಬೇಕು.	11,160/-
9.	ಸಹಾಯಕ ತೋಟಗಾರಿಕೆ ಅಧಿಕಾರಿಗಳು	01 (01–ಸಾಮಾನ್ಯ)	1) ಬಿ.ಎಸ್ಸಿ. ಹಾಗೂ ಎಂ.ಎಸ್ಸಿ. ತೋಟಗಾರಿಕೆ ವಿಷಯದಲ್ಲಿ ಅಂಗೀಕೃತ ವಿಶ್ವವಿದ್ಯಾಲಯದಿಂದ ಪಡೆದ ಪದವಿ 2) ತೋಟಗಾರಿಕೆಯಲ್ಲಿ 1 ವರ್ಷದ ಅನುಭವ 3) ತೋಟಗಾರಿಕೆ ಕ್ಷೇತ್ರದಲ್ಲಿ 2 ವರ್ಷಗಳ ಅನುಭವ	20,070/-
10.	ಸಹಾಯಕ (ಕಾನೂನು ಕೋಶ)	01 (01–ಸಾಮಾನ್ಯ)	1) ಅಂಗೀಕೃತ ವಿಶ್ವವಿದ್ಯಾಲಯದಿಂದ ಪಡೆದ ಕಾನೂನು ಪದವಿ 2) ಕನಿಷ್ಠ 5 ವರ್ಷಗಳ ಅನುಭವ 3) ಸರ್ಕಾರಿ ಇಲಾಖೆಗಳ ಪ್ರಕರಣಗಳನ್ನು ನಿರ್ವಹಿಸಿದ ಅನುಭವ ಮತ್ತು ಪೂರಕ ದಾಖಲೆಗಳು.	18,210/-
11.	ಪ್ಲೇಸ್‌ಮೆಂಟ್ ಅಧಿಕಾರಿ	01 (01–ಸಾಮಾನ್ಯ)	1) ಅಂಗೀಕೃತ ವಿಶ್ವವಿದ್ಯಾಲಯದಿಂದ ಪಡೆದ ಎಂ.ಬಿ.ಎ ಪದವಿ 2) ಮಾನವ ಸಂಪನ್ಮೂಲ ವಿಭಾಗದಲ್ಲಿ 3 ವರ್ಷಗಳ ಅನುಭವವಿದ್ದಲ್ಲಿ ಆದ್ಯತೆ ನೀಡಲಾಗುವುದು	25000/-

ಆಯ್ಕೆ ಮಾಡುವ ವಿಧಾನ:

ಪೂರ್ಣ ವಿವರಗಳನ್ನು ಭರ್ತಿ ಮಾಡಿ ಅರ್ಜಿ ಸಲ್ಲಿಸಿದ ಮತ್ತು ಎಲ್ಲಾ ಅರ್ಹತೆಗಳನ್ನು ಪೂರೈಸುವ ಅಭ್ಯರ್ಥಿಗಳಿಗೆ ವಿಶ್ವವಿದ್ಯಾಲಯದ ವತಿಯಿಂದ ನೇರ ಸಂದರ್ಶನದ ಮೂಲಕ ಆಯ್ಕೆ ಮಾಡಿಕೊಳ್ಳಲಾಗುವುದು.

ನಿಬಂಧನೆಗಳು ಮತ್ತು ಸೂಚನೆಗಳು :

1) ಈ ಹುದ್ದೆಗಳು ಸಂಪೂರ್ಣವಾಗಿ ತಾತ್ಕಾಲಿಕವಾಗಿರುತ್ತವೆ. ಸದರಿ ಹುದ್ದೆಗಳಿಗೆ ನೇಮಕಗೊಳ್ಳುವ ಅಭ್ಯರ್ಥಿಗಳ ಸೇವೆ ತೃಪ್ತಿಕರವಾಗಿದ್ದಲ್ಲಿ ಮಾತ್ರ 6 ತಿಂಗಳವರೆಗೆ ಸೇವೆಯನ್ನು ಮುಂದುವರೆಸಿ ನಂತರ ಒಂದು ದಿನದ ಬ್ರೇಕ್ ಮಾಡಿ ಪ್ರತಿ 6 ತಿಂಗಳಿಗೊಮ್ಮೆ ಪ್ರತ್ಯೇಕವಾಗಿ ಸೇವೆ ಮುಂದುವರಿಕೆಗೆ ಸಂಬಂದಿಸಿದಂತೆ ಕಾರ್ಯಾದೇಶ ನೀಡಲಾಗುವುದು. ಅಭ್ಯರ್ಥಿಗಳ ಸೇವೆ ತೃಪ್ತಿಕರವೆನಿಸದಿದ್ದಲ್ಲಿ ಯಾವುದೇ ಸಂದರ್ಭದಲ್ಲಿ ಕಾರ್ಯಾದೇಶವನ್ನು ರದ್ದುಪಡಿಸುವ ಅಧಿಕಾರ ವಿಶ್ವವಿದ್ಯಾಲಯಕ್ಕೆ ಇರುತ್ತದೆ. ಹೀಗೆ ಪಡೆದುಕೊಂಡ ಸೇವೆಯನ್ನು ಗರಿಷ್ಠ 5 ವರ್ಷಗಳ ಅವಧಿಗೆ ಮಾತ್ರ ಮುಂದುವರೆಸಿಕೊಂಡು ಹೋಗಲು ಅವಕಾಶವಿದೆ.

2) ಆಯ್ಕೆಗೊಂಡ ಅಭ್ಯರ್ಥಿಗಳು ವಿಶ್ವವಿದ್ಯಾಲಯದಲ್ಲಿ ಖಾಯಂ ನೇಮಕಾತಿಗಾಗಿ ಯಾವುದೇ ಹಕ್ಕನ್ನು ಸ್ಥಾಪಿಸತಕ್ಕದ್ದಲ್ಲ ಹಾಗೂ ಈ ಬಗ್ಗೆ ಮುಚ್ಚಳಿಕೆ ಪತ್ರವನ್ನು ನೀಡಬೇಕಾಗಿರುತ್ತದೆ.

3) **ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳು ತಮ್ಮ ನೇಮಕಾತಿಗಾಗಿ ವಿಶ್ವವಿದ್ಯಾಲಯದ ಮೇಲೆ ಯಾವುದೇ ರೀತಿಯಲ್ಲಿ ಪ್ರಭಾವವನ್ನು ಬಳಸುವಂತಿಲ್ಲ ಅಥವಾ ಒತ್ತಡ ಹಾಕುವಂತಿಲ್ಲ ಹಾಗೆ ಮಾಡಿದಲ್ಲಿ ಅಂತಹ ಅಭ್ಯರ್ಥಿಗಳ ಅರ್ಜಿಗಳನ್ನು ತಿರಸ್ಕರಿಸಲಾಗುವುದು.**

4) ಅಭ್ಯರ್ಥಿಗಳು ಈ ಕೆಳಕಾಣಿಸಿದ ವಯೋಮಿತಿಯಲ್ಲಿರಬೇಕು.

ಪ.ಜಾ./ಪ.ಪಂ./ಪ್ರ.ವರ್ಗ–1 ಅಭ್ಯರ್ಥಿಗಳಿಗೆ	ಕನಿಷ್ಠ 18 ತುಂಬಿರಬೇಕು ಹಾಗೂ ಗರಿಷ್ಠ 40 ವರ್ಷ ಮೀರಿರಬಾರದು.
ಪ್ರವರ್ಗ II(a), II(b), III(a), III(b) ಹಾಗೂ ಹಿಂದೂಳಿದ ವರ್ಗದ ಅಭ್ಯರ್ಥಿಗಳಿಗೆ	ಕನಿಷ್ಠ 18 ತುಂಬಿರಬೇಕು ಹಾಗೂ ಗರಿಷ್ಠ 38 ವರ್ಷ ಮೀರಿರಬಾರದು.
ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗೆ	ಕನಿಷ್ಠ 18 ತುಂಬಿರಬೇಕು ಹಾಗೂ ಗರಿಷ್ಠ 35 ವರ್ಷ ಮೀರಿರಬಾರದು.

For more job news visit : www.kpscvaani.com

5) ಅಭ್ಯರ್ಥಿಗಳ ಆಯ್ಕೆಯ ವಿಷಯದಲ್ಲಿ ವಿಶ್ವವಿದ್ಯಾಲಯದ ನಿರ್ಣಯವೇ ಅಂತಿಮವಾಗಿರುತ್ತದೆ ಹಾಗೂ ಆಯ್ಕೆಗೊಂಡ ಅಭ್ಯರ್ಥಿಗಳ ಸೇವೆ ಮುಂದುವರೆಸುವ ಅಥವಾ ರದ್ದುಪಡಿಸುವ ಅಧಿಕಾರವನ್ನು ವಿಶ್ವವಿದ್ಯಾಲಯ ಹೊಂದಿರುತ್ತದೆ.

6) ಈ ಅಧಿಸೂಚನೆಯನ್ನು ಯಾವುದೇ ಕಾರಣ ನೀಡದೆ ರದ್ದುಪಡಿಸುವ ಅಧಿಕಾರ ವಿಶ್ವವಿದ್ಯಾಲಯಕ್ಕೆ ಇರುತ್ತದೆ.

7) ಅಭ್ಯರ್ಥಿಗಳ ನೇಮಕಾತಿಯನ್ನು ಸಂದರ್ಶನದ ಮೂಲಕ ಆಯ್ಕೆ ಮಾಡಲಾಗುವುದು.

8) ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಸೇವಾನುಭವದ ಮೂಲ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಲಗತ್ತಿಸಬೇಕು.

9) ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಸೇವೆ ಸಲ್ಲಿಸಿದ/ಸಲ್ಲಿಸುತ್ತಿರುವ ಸಂಸ್ಥೆಯಿಂದ ವೇತನ ಸಂದಾಯವಾಗಿರುವ ಬಗ್ಗೆ ಅಧಿಕೃತ ಮತ್ತು ದೃಢೀಕೃತ ದಾಖಲೆಗಳನ್ನು ಸಲ್ಲಿಸುವುದು.

10) ಸಂದರ್ಶನಕ್ಕೆ ಹಾಜರಾಗುವ ಅಭ್ಯರ್ಥಿಗಳಿಗೆ ಯಾವುದೇ ರೀತಿಯ ಪ್ರಯಾಣ ಭತ್ಯೆಯನ್ನು ನೀಡಲಾಗುವುದಿಲ್ಲ.

11) ಅಭ್ಯರ್ಥಿಗಳು ಈ ಅಧಿಸೂಚನೆಯಲ್ಲಿ ತಿಳಿಸಿದ ಅರ್ಹತೆಗಳಿಗೆ ಸಂಬಂದಿಸಿದಂತೆ ಅಧಿಕೃತ ಮತ್ತು ದೃಢೀಕೃತ ದಾಖಲೆಗಳನ್ನು ಕಡ್ಡಾಯವಾಗಿ ಸಲ್ಲಿಸುವುದು. ನಿರ್ದಿಷ್ಟ ದಾಖಲೆಗಳನ್ನು ಸಲ್ಲಿಸಲು ವಿಫಲವಾಗುವ ಅಭ್ಯರ್ಥಿಗಳ ಅರ್ಜಿಯನ್ನು ಪರಿಗಣಿಸಲಾಗುವುದಿಲ್ಲ ಹಾಗೂ ಅಪೂರ್ಣ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಹಾಗೂ ಈ ವಿಷಯದಲ್ಲಿ ಯಾವುದೇ ರೀತಿಯ ಪತ್ರ ವ್ಯವಹಾರಕ್ಕೆ ಅವಕಾಶ ಇರುವುದಿಲ್ಲ.

12) ನಿಗದಿತ ವರ್ಗಕ್ಕೆ ಸೇರಿದ ಅಭ್ಯರ್ಥಿಗಳು ಆಯಾ ವರ್ಗಗಳ ಜಾತಿ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಲಗತ್ತಿಸಬೇಕು.

13) ಯಾವುದೇ ಸಂದರ್ಭದಲ್ಲಿ ಅಭ್ಯರ್ಥಿಗಳು ಸಲ್ಲಿಸಿದ ದಾಖಲೆಗಳು ಅಥವಾ ನೀಡಿದ ಮಾಹಿತಿಯು ಖೊಟ್ಟಿ ಅಥವಾ ತಪ್ಪು ಎಂದು ಕಂಡುಬಂದಲ್ಲಿ ಕಾನೂನಿನ ಪ್ರಕಾರ ಸೂಕ್ತ ಕ್ರಮವನ್ನು ಜರುಗಿಸಲಾಗುವುದು.

14) ಆಯ್ಕೆಗೊಳ್ಳುವ ಅಭ್ಯರ್ಥಿಗಳಿಗೆ ಅಧಿಸೂಚನೆಯಲ್ಲಿ ಕಾಣಿಸಿದಂತೆ ನಿಗದಿತ ಸಂಚಿತ ವೇತನವನ್ನು ಪಾವತಿ ಮಾಡಲಾಗುವುದು.

15) ಅರ್ಹ ಅಭ್ಯರ್ಥಿಗಳನ್ನು ಮಾತ್ರ ಸಂದರ್ಶನಕ್ಕೆ ಆಹ್ವಾನಿಸಲಾಗುವುದು. ಅಂತಹ ಅಭ್ಯರ್ಥಿಗಳಿಗೆ ಮಾತ್ರ ಸಂದರ್ಶನಕ್ಕೆ ಹಾಜರಾಗಲು ಸೂಚನಾ ಪತ್ರವನ್ನು ಕಳುಹಿಸಲಾಗುವುದು.

05/05/24

(ಡಾ. ಹನುಮಂತಪ್ಪ ಕೆ.ಟಿ.)
ಕುಲಸಚಿವರು